**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 23.03.2023
ಪಾಟಿ ಸವಾಲು : 2 ನೇ ಪ್ರತಿವಾದಿ ಪರ ಶ್ರೀ ಪಿ.ಎಲ್.ಕೆ ವಕೀಲರಿಂದ

ಈ ದಾವೆಯಲ್ಲಿ ನಮೂದಿಸಿರುವ ಜಮೀನುಗಳ ಸರ್ವೆ ಸಂಖ್ಯೆ ಗೊತ್ತಿಲ್ಲ. ಎಷ್ಟು ಸ್ವತ್ತುಗಳ ಸಂಬಂಧ ಈ ದಾವೆಯನ್ನು ಸಲ್ಲಿಸಲಾಗಿದೆ ಎನ್ನುವ ಬಗ್ಗೆಯೂ ಸಹ ಗೊತ್ತಿಲ್ಲ. ದಾವಾ ಸ್ವತ್ತುಗಳು ನನ್ನ ತಾಯಿಯ ಹೆಸರಿನಲ್ಲಿದ್ದವು. ನನ್ನ ತಾಯಿಯ ಹೆಸರಿಗೆ ಎಷ್ಟು ವರ್ಷಗಳ ಹಿಂದೆ ದಾವಾ ಸ್ವತ್ತುಗಳು ಬಂದಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ದಾವಾ ಸ್ವತ್ತುಗಳು ಹೇಗೆ ಬಂದವು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಈಗ ದಾವಾ ಸ್ವತ್ತುಗಳ ಆರ್.ಟಿ.ಸಿ ಯಾರ ಹೆಸರಿನಲ್ಲಿ ಇರುತ್ತದೆ ಎನ್ನುವ ಬಗ್ಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳಲ್ಲಿ ಪ್ರಸುತ್ತ ಪ್ರತಿವಾದಿ-2 ಮತ್ತು 5 ರವರು ವ್ಯವಸಾಯ ಮಾಡುತ್ತಿದ್ದಾರೆ. ಸಾಕ್ಷಿ ಮುಂದುವರೆದು ಪ್ರತಿವಾದಿ-2, 3 ಮತ್ತು 5 ರವರು ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ ಯಾವ ಸಾಲಿನಲ್ಲಿ ಮೃತರಾಗಿದ್ದಾರೆ ಎನ್ನುವ ಬಗ್ಗೆ ಗೊತ್ತಿಲ್ಲ. ನನ್ನ ತಂದೆ ಮೃತರಾದಾಗ ನಮಗೆ ಯಾರಿಗೂ ಕೂಡ ಮದುವೆಯಾಗಿರಲಿಲ್ಲ ಎಂದರೆ ಸರಿ. ನನ್ನ ತಂದೆ ಮೃತರಾದಾಗ 2 ನೇ ಪ್ರತಿವಾದಿ ಮನೆಯ ವ್ಯವಹಾರಗಳನ್ನೆಲ್ಲಾ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯೇ ಮನೆಯ ವ್ಯವಹಾರಗಳನ್ನು ನೋಡಿ ಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ಮದುವೆ 1983 ಸಾಲಿನಲ್ಲಿ ನಡೆದಿರುತ್ತದೆ. ನನ್ನ ಗಂಡ ಮೈಸೂರಿನವರು. ನನ್ನ ತಾಯಿ, ಪ್ರತಿವಾದಿ-2, 3 ಮತ್ತು 5 ರವರು ಬೊಂತಗನಹಳ್ಳಿಯಲ್ಲಿ ಒಟ್ಟಾಗಿ ವಾಸವಿದ್ದರು.

2 ನೇ ಪ್ರತಿವಾದಿ ಬೆಮೆಲ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತು. ನಮಗೆ ಅನುಕೂಲವಿರಲಿಲ್ಲ ಎನ್ನುವ ಕಾರಣಕ್ಕೆ ನಾನು ಮತ್ತು ನನ್ನ ಗಂಡ ಸ್ವಲ್ಪ ದಿನಗಳ ಕಾಲ ಬೊಂತಗಹಳ್ಳಿಯ ನಮ್ಮ ತಾಯಿಯವರ ಮನೆಯಲ್ಲಿ ಸ್ವಲ್ಪ ದಿನ ವಾಸವಿದ್ದೇವು ಎಂದರೆ ಸರಿ. ನಮ್ಮ ತಾಯಿಯವರ ಕುಟುಂಬಕ್ಕೆ ಸೇರಿದ ಬೇರೆ ಮನೆಯಲ್ಲಿ ನಾವು ವಾಸವಿದ್ದೇವು. ಬೊಂತಗಳ್ಳಿಯಲ್ಲಿ ನಮ್ಮ ತಾಯಿಯವರುವಾಸ

ಮಾಡುತ್ತಿರುವ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಲಾಗಿದೆಯೋ ಅಥವಾ ಇಲ್ಲವೇ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆ ಯಾರಿಗೆ ಸೇರಿದ್ದು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ತಂದೆ ಮೃತರಾಗುವ ಪೂರ್ವ ಕೆ.ಇ.ಬಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಮೃತರಾದ ನಂತರ ನನ್ನ ತಾಯಿಗೆ ಅನುಕಂಪದ ಆಧಾರ ಕೆಲಸ ದೊರಕಿರುತ್ತದೆ. ನನ್ನ ತಾಯಿ ಯಾವಾಗ ಕೆಲಸದಿಂದ ನಿವೃತ್ತರಾಗಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿ ನಿವೃತ್ತಿಯಾದ ನಂತರ ಅವರಿಗೆ ಬಂದ ಹಣದಲ್ಲಿ ನನಗೆ ಏನು ಕೊಟ್ಟಿಲ್ಲ.

ದಾವಾ ಸ್ವತ್ತಿನ ಸಂಬಂಧ ಕಂದಾಯವನ್ನು 2ನೇ ಪ್ರತಿವಾದಿಯೇ ಕಟ್ಟುತ್ತಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೃತರಾದ ನಂತರ ದಾವಾ ಸ್ವತ್ತುಗಳಲ್ಲಿ ಭಾಗ ಬೇಕೆಂದು ನಾನು ಕೇಳಿಕೊಂಡಿದ್ದೆ ಆದರೆ ನಿರ್ದಿಷ್ಟ ದಿನಾಂಕ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸುವ 10 ವರ್ಷಗಳ ಪೂರ್ವ ನಾನು ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿದಾಗ ಪಂಚಾಯಿತಿ ಸಹ ನಡೆದಿತ್ತು.

ಪ್ರತಿವಾದಿ-4 ಮತ್ತು 6 ರವರ ಮದುವೆಯನ್ನು 2ನೇ ಪ್ರತಿವಾದಿಯೇ ಮಾಡಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಅವರ ಮದುವೆ ಮಾಡಲು 2ನೇ ಪ್ರತಿವಾದಿ ಬ್ಯಾಂಕಿನಿಂದ ಸಾಲ ಸಹ ಮಾಡಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ನಮ್ಮ ಕುಟುಂಬದಲ್ಲಿ ಒಂದು ಸ್ವತ್ತನ್ನು ನಿಂಗೇಗೌಡ ಎನ್ನುವವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. 1992 ರ ಪೂರ್ವದಲ್ಲಿ ನಮ್ಮ ಕುಟುಂಬದಲ್ಲಿ ಭಾಗವಾಗಿದ್ದು ಅದರಲ್ಲಿ ನನಗೆ ಚಿನ್ನ ಮತ್ತು ಹಣವನ್ನು ಕೊಡಲಾಗಿದೆ ಎಂದರೆ ಸುಳ್ಳು. ಸದರಿ ಭಾಗದಲ್ಲಿ 1, 3 ಮತ್ತು 5ನೇ ಪ್ರತಿವಾದಿಗಳು ತಮಗೆ ಬೇಕಾದಂತಹ ಸ್ವತ್ತುಗಳನ್ನು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಈ ದಾವೆಯಲ್ಲಿ ತೋರಿಸಿರುವ ಸ್ವತ್ತುಗಳು 2ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳಲ್ಲಿ 2ನೇ ಪ್ರತಿವಾದಿ ಬೋರ್ ವೇಲ್ ತೆಗೆಸಿ ಬೇಲಿ ಹಾಕಿ ತೋಟ ಸಹ ಮಾಡಿದ್ದಾರೆ ಎಂದರೆ ಸರಿ. ಸದರಿ ಬೋರ್ ವೇಲ್ ತೆಗೆಸಲುಹಾಗೂ ತೋಟ ಮಾಡಲು ಖರ್ಚನ್ನು 2ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1995-1996 ಸಾಲಿನಲ್ಲಿ 2ನೇ ಪ್ರತಿವಾದಿ ಹೆಸರಿಗೆ ದಾವಾ ಸ್ವತ್ತುಗಳ ಖಾತಾ ಬದಲಾವಣೆ ಮಾಡಬಹುದು ಎಂದು ನಾನು ಸೇರಿ ಇತರೆ ಸದಸ್ಯರು ಒಪ್ಪಿಗೆಯನ್ನು ರೆವಿನ್ಯೂ ಅಧಿಕಾರಿಯವರಿಗೆ ನೀಡಿದ್ದೇವು ಎಂದರೆ ಗೊತ್ತಿಲ್ಲ. ನಾವು ನೀಡಿದ ಒಪ್ಪಿಗೆ ಮೇರೆಗೆ

ದಾವಾ ಸ್ವತ್ತುಗಳ ಖಾತಾ 2 ನೇ ಪ್ರತಿವಾದಿ ಹೆಸರಿಗೆ ಬದಲಾವಣೆಯಾಗಿರುವ ಕಾರಣದಿಂದಲೇ ನಾವು ಇಲ್ಲಿಯವರೆಗೂ ಕೂಡ ರೆವಿನ್ಯೂ ನ್ಯಾಯಾಲಯದಲ್ಲಿ 2 ನೇಪ್ರತಿವಾದಿಗೆ ಆಗಿರುವ ರೆವಿನ್ಯೂ ದಾಖಾಲತಿಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ ಹತ್ತಿರ ನಾನು ಹೋಗಿರುವುದೇ ಇಲ್ಲ. ನನ್ನ ಮಕ್ಕಳ ಮದುವೆ ಮತ್ತು ಅವರ ವಿದ್ಯಾಭ್ಯಾಸದ ಖರ್ಚನ್ನು 2 ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸುಳ್ಳು. ನಾನು 2 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಭಾಗದಲ್ಲಿ ಬಂದಿರುವ ಸ್ವತ್ತಿನ ಸಂಬಂಧ ನನಗೆ ಯಾವುದೇ ಭಾಗಾಂಶ ಹಕ್ಕು ಇಲ್ಲವೆಂದರೆ ಸರಿಯಲ್ಲ.

**ಪಾಟಿ ಸವಾಲು : 1, 3 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ಎಸ್ ವಕೀಲರಿಂದ**

1, 3 ಮತ್ತು 5 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪ್ರಾರ್ಥನೆಯನ್ನು ತಿರಸ್ಕರಿಸಲಾಗಿದೆ ಮತ್ತು ಅವರ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.